ಪ್ರಜಾವಾಣಿ

# ಈಜು: ರಾಷ್ಟ್ರ ಖಲೆ ಬರೆದ ಜೈನ್ ವಿ.ವಿ.

ಬೆಂಗಳೂರು: ಜೈನ್ ವಿಶ್ವವಿದ್ಯಾಲಯ ತಂಡದವರು ಅಖಿಲ ಭಾರತ ಪುರುಷರ ಅಂತರ ವಿ.ವಿ ಈಜು ಚಾಂಪಿಯನ್‌ಷಿಪ್‌ನ 4*100 ಮೀಟರ್ಸ್ ಫ್ರೀಸ್ಟೈಲ್ ರಿಲೆಯಲ್ಲಿ ರಾಷ್ಟ್ರೀಯ ದಾಖಲೆ ಬರೆದರು.

ಜೈನ್ ಅಂತರರಾಷ್ಟ್ರೀಯ ರೆಸಿಡೆನ್ಶಿಯಲ್ ಶಾಲೆ ಈಜುಕೊಳದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಜೈನ್ ವಿ.ವಿ ತಂಡವು 3 ನಿಮಿಷ 38.62 ಸೆಕೆಂಡುಗಳಲ್ಲಿ ಗುರಿ ತಲುಪಿತು.

ತಂಡದಲ್ಲಿ ರಕ್ಷಿತ್ ಯು ಶೆಟ್ಟಿ, ಚಂದ್ರ ಪಿ, ಪೃಥ್ವಿಕ್ ಡಿ.ಎಸ್, ಲಿಖಿತ್ ಎಸ್.ಪಿ ಇದ್ದರು. ಪಂಜಾಬ್ ವಿಶ್ವವಿದ್ಯಾಲಯವು ಎರಡನೇ ಸ್ಥಾನ ಗಳಿಸಿತು.

**ಫಲಿತಾಂಶಗಳು: 400 ಮೀಟರ್ಸ್ ಮೆಡ್ಲೆ:** ಎಮಿಲ್ ರಾಬಿನ್ ಸಿಂಗ್ ಟಿ (ಮನೋಮಣಿಯಂ ಸುಂದರನಾರ್ ವಿ.ವಿ) -1 ಕಾಲ: 4.41. ಸೇತು ಮಾಣಿಕ್‌ವೇಲ್ ಟಿ (ಮನೊಮಣಿಯಂ ಸುಂದರನಾರ್ ವಿ.ವಿ)-2, ಶಿವ ಎಸ್ (ಜೈನ್ ವಿವಿ)-3. **200 ಮೀಟರ್ಸ್ ಫ್ರೀಸ್ಟೈಲ್:** ಕುಶಾಗ್ರ ರಾವತ್ (ದೆಹಲಿ ವಿ.ವಿ)-1 ಕಾಲ: 1.56. ಅವಿನಾಶ್ ಮಣಿ (ವಿಟಿಯು ಬೆಳಗಾವಿ)-2, ರಾಹುಲ್ ಎಂ (ಜೈನ್ ವಿ.ವಿ)-3. **200 ಮೀಟರ್ಸ್ ಬ್ಯಾಕ್‌ಸ್ಟ್ರೋಕ್:** ಸೇತು ಮಾಣಿಕವೇಲು ಟಿ (ಮನೊಂಮಣಿಯಂ ವಿ.ವಿ)-1, ಕಾಲ:2.09. ಶಿವ ಎಸ್ (ಜೈನ್ ವಿವಿ)-2, ಕೆ. ಅಬ್ಬಾಸುದ್ದೀನ್ (ಅಣ್ಣಾ ವಿ.ವಿ)-3.